**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಂಡೂರು**
**ಸಿ.ಸಿ. ನಂ: 571/2025**

| | | | |
|---|---|---|---|
| **ಸಾಕ್ಷಿದಾರರ ಹೆಸರು** | **:** | **ಪೆನ್ನಪ್ಪಾ** | **ಪಿ.ಡಬ್ಲ್ಯೂ-01** |
| **ತಂದೆಯ ಹೆಸರು** | **:** | **ಮರ ಓಬಯ್ಯ** | **ಸಿ.ಡಬ್ಲ್ಯೂ-01** |
| **ವಯಸ್ಸು** | **:** | **38 ವರ್ಷ** | |
| **ಉದ್ಯೋಗ** | **:** | **ವ್ಯವಸಾಯ** | **ಸಾಕ್ಷಿಗೆ ಪ್ರಮಾಣ ವಚನ ಭೋದಿಸಿದ ದಿನಾಂಕಃ 08.12.2025.** |
| **ವಾಸಸ್ಥಳ** | **:** | **ಮರ್ತಾಜನಹಳ್ಳಿ** | |

**ಸಾಕ್ಷಿಯ ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನನಗೆ ಚಾಸಾ 2 ರಿಂದ 5, ಚಾಸಾ 7 ಮತ್ತು 8 ರವರು ಪರಿಚಯ. ಅದೇ ರೀತಿಯಾಗಿ ಆರೋಪಿ ಸಹ ನನಗೆ ಗೊತ್ತು.

ನಾನು ಕುಡತಿನಿಯಲ್ಲಿ ವಾಸವಾಗಿದ್ದು ಜಿಂದಾಲ್‌ಗೆ ಕೆಲಸ ಮಾಡುಲು ಹೋಗುತ್ತೇನೆ. ದಿಃ 24.06.2024 ರಂದು ಚಾಸಾ 4 ರವರು ಮರ್ತಾಜನಹಳ್ಳಿಯಿಂದ ನನ್ನನ್ನು ಮತ್ತು ನನ್ನ ಅಣ್ಣನನ್ನು ನೋಡಲು ಕುಡತಿನಿಗೆ ಬರುತ್ತಿದ್ದರು. ಆಗ ಅಪಘಾತವಾಗಿರುತ್ತದೆ. ಚಾಸಾ 5 ರವರನ್ನು ಅಪಘಾತದ ಬಗ್ಗೆ ವಿಚಾರಿಸಿದಾಗ ಗೊಲ್ಲರ ಹಳ್ಳಿ ಕ್ರಾಸ್ ಸಮೀಪದ ಸುಡುಗಾಡ ಹತ್ತಿರ ಅಪಘಾತ ಆಗಿದೆ ಎಂದು ತಿಳಿಸಿರುತ್ತಾರೆ. ಸದರಿ ಅಪಘಾತವು ಕೆ.ಎಸ್.ಅರ್.ಟಿ.ಸಿ ಬಸ್ ಮತ್ತ ಬೈಕ್ ನಡುವೆ ಆಗಿರುತ್ತದೆ. ಸದರಿ ಅಪಘಾತದಲ್ಲಿ ಚಾಸಾ 4 ರವರಿಗೆ ತಲೆಗೆ, ಎದೆಗೆ, ಬೆನ್ನು ಮತ್ತು ಕಾಲು ಕೈಗೆ ಪೆಟ್ಟಾಗಿರುತ್ತದೆ. ಅವರನ್ನು ಮೆಟ್ರಿಕಿಯಲ್ಲಿ ಇರುವ ಆಸ್ಪತ್ರೆಗೆ ತೋರಿಸಿದ ನಂತರ ಅವರು ಬಳ್ಳಾರಿಗೆ ಕರೆದುಕೊಂಡು ಹೋಗಲು ತಿಳಿಸಿರುತ್ತಾರೆ. ಅಲ್ಲಿ ಹೋದ ನಂತರ ಅವರು ದೂರು ಕೊಡಲು ಹೇಳಿರುತ್ತಾರೆ. ಹಾಗಾಗೀ ನಾನು ದೂರು ನೀಡಿರುತ್ತೇನೆ. ಸಾಕ್ಷಿ ದೂರಿನಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

**(ಎಪಿಪಿಯವರು ಸಾಕ್ಷಿಯನ್ನು ಭಾಗಶ: ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಅನುಮತಿ ಕೋರಿದ್ದರಿಂದ ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲುಃ ಎ.ಪಿ.ಪಿ. ರವರಿಂದಃ**

ನಾನು ಬೆಳ್ಳಿಗ್ಗೆ 8.30 ಗಂಟೆಗೆ ಕುಡತಿನಿಯಲ್ಲಿ ಇದ್ದಾಗ ಚಾಸಾ 5 ರವರು

ನನಗೆ ಫೋನ್ ಮಾಡಿ ಬೆಳ್ಳಿಗ್ಗೆ 7.00 ಗಂಟೆಗೆ ನಾನು ಬೈಕ್ ನಲ್ಲಿ ಗೊಲ್ಲರ ಹಳ್ಳಿ ಕ್ರಾಸ್ ಹತ್ತಿರ ಹೋಗುತ್ತಿದ್ದಾರೆ ನನ್ನ ಮುಂದೆ ಚಾಸಾ 4 ರವರು ತನ್ನ ಮೊ.ಸೈ ನಡೆಸಿಕೊಂಡು ಗೊಲ್ಲರ ಹಳ್ಳಿ ಕ್ರಾಸ್ ಹತ್ತಿರ ಹೋಗುತ್ತಿದ್ದಾಗ, ಊರು ದಾಟಿದ ನಂತರ ಸುಡುಗಾಡ ಹತ್ತಿರ ರಸ್ತೆಯ ತಿರುವಿನಲ್ಲಿ ಹೋಗುತ್ತಿರುವಾಗ ಎದುರಿನಿಂದ ಒಂದು ಕೆ ಎಸ್ ಅರ್ ಟಿ ಸಿ ಬಸ್ ಚಾಲಕ ತನ್ನ ಬಸ್ ನ್ನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದು ಚಾಸಾ 4 ರವರ ವಾಹನಕ್ಕೆ ಡಿಕ್ಕಿ ಪಡೆಸಿರುತ್ತಾನೆ ಎಂದು ನನಗೆ ತಿಳಿಸಿರುತ್ತಾರೆ ಎಂದರೆ ಸರಿ. ಅದೇ ರೀತಿಯಾಗಿ ಚಾಸಾ 5 ರವರು ಗಾಯಾಳು ಚಾಸಾ 4 ರವರನ್ನು ವಿಚಾರಿಸಿದಾಗ ಅವರ ನನ್ನ ನಂಬರ ಕೊಟ್ಟಿರುವುದರಿಂದ ಅವರು ನನಗೆ ಫೋನ್ ಮಾಡಿ ಅಪಘಾತದ ವಿಚಾರ ತಿಳಿಸಿರುತ್ತಾರೆ ಎಂದರೆ ಸರಿ. ಅಪಘಾತ ಪಡೆಸಿದ ಬಸ್ ನಂಃಕೆಎ 34 ಎಫ್ 1211 ಇತ್ತು ಎಂದರೆ ಸರಿ. ಅದೇ ರೀತಿಯಾಗಿ ಚಾಸಾ 4 ರವರು ಚಲಾಯಿಸುತ್ತಿದ್ದ ವಾಹನ ನಂಃಕೆಎ 34 ಇಅರ್ 8377 ಇತ್ತು ಎಂದರೆ ಸರಿ.

ನಂತರ ನಾನು ದಿಃ25.06.2024 ರಂದು ಮಃ2.30 ಗಂಟೆಗೆ ಠಾಣೆಗೆ ಹೋಗಿ ದೂರು ಸಲ್ಲಿಸಿರುತ್ತೇನೆ ಎಂದರೆ ಸರಿ.

**(ಪಾಟೀ ಸವಾಲುಃ ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಕಾಲವಾಕಾಶ ಕೇಳಿದ್ದು, ಯಾವುದೇ ಕಾರಣ ಹೇಳಿರುವುದಿಲ್ಲ. ಹಾಗಾಗೀ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)**

**ಮರು ವಿಚಾರಣೆಃ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೆ.ಸರಿ.ಇದೆ.**

**ಪ್ರ.ದ.ನ್ಯಾ.ದಂಡಾಧಿಕಾರಿಗಳು,**
**ಸಂಡೂರು.**